ದಿನಾಂಕ 12-04-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು: ಶ್ರೀ. ಎಸ್.ಆರ್.ಬಿ. ವಾದಿ ಪರ ವಕೀಲರಿಂದ:-**

ದಾವಾ ಆಸ್ತಿಯ ಚೆಕ್ ಬಂದಿ ನನಗೆ ಗೊತ್ತು. ದಾವಾ ಆಸ್ತಿಯ ಚೆಕ್ ಬಂದಿಯೊಳಗೆ ಮನೆ ಇದೆ. ದಾವಾ ಆಸ್ತಿಯ ಚೆಕ್ ಬಂದಿಯೊಳಗೆ ಮನೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಖಾಲಿ ಜಾಗ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ರೂಪ ಎನ್ನುವವರು ಮನೆಯನ್ನು ಕಟ್ಟಿರುತ್ತಾರೆ. ದಾವಾ ಆಸ್ತಿಯಲ್ಲಿ ರೂಪರವರು ಮನೆಯನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ರೂಪ ರವರು ಕಟ್ಟಿರುವ ಮನೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕ ನನ್ನ ಆಸ್ತಿ ಇದೆ. ನನ್ನ ಆಸ್ತಿಯ ವಿಸ್ತೀರ್ಣ 18 ಗುಂಟೆ. ಸದರಿ ಆಸ್ತಿಯನ್ನು ನ್ಯಾಯಾಲಯದ ಮುಖಾಂತರವಾಗಿ ಸರ್ವೇ ಮಾಡಿಸಬಹುದು.

ದಾವಾ ಆಸ್ತಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಾನು ನಮ್ಮದು ಜಾಗ ಇದೆ ಎಂದು ತೊಂದರೆ ಮಾಡುತ್ತಿದ್ದೇನೆಂದರೆ ಸರಿಯಲ್ಲ.

ನಾನು ಪವರ್ ಚಾನಲ್ ನ ರಿಪೋರ್ಟರ್. ನಾನು ನನ್ನ ಪ್ರಭಾವ ಬೀರಿ ಪಂಚಾಯಿತಿಯಲ್ಲಿ ಎಲ್ಲಾ ದಾಖಲೆಗಳನ್ನು ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿ.ಡಿ.3 ನ್ನು ನಾನು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಸರ್ವೆಯರ್ ಸ್ಥಳಕ್ಕೆ ಬಂದು ಸರ್ವೇ ಮಾಡಿದ್ದರ ಬಗ್ಗೆ ಸರ್ವೆಯರ್ ಹತ್ತಿರ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಪಂಚಾಯಿತಿಯವರ ಹತ್ತಿರ ಇರಬಹುದು, ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಸರ್ವೇ ಮಾಡುವ ಕಾಲಕ್ಕೆ ನಾನು ಇದ್ದೆ. ಯಾವುದೇ ಸರ್ವೇ ನಡೆದಿಲ್ಲ, ಸರ್ವೆಯರ್ ಯಾವುದೇ ಸರ್ವೇ ಆಗಲೀ ಅಥವಾ ಸ್ಕೆಚ್ ಆಗಲೀ ಮಾಡಿಲ್ಲ ಎಂದರೆ ಸರಿಯಲ್ಲ.

ಸರ್ವೇ ಮಾಡಲು ನನಗೆ ಪಂಚಾಯಿತಿಯವರು ಮೌಖಿಕವಾಗಿ ತಿಳಿಸಿದ್ದರು. ನಮ್ಮ ಜಮೀನಿನ್ನು ಮತ್ತು ಗ್ರಾಮ ಠಾಣಾ ಜಮೀನನ್ನು ಸರ್ವೇ ಮಾಡಿದ್ದರು. ಸರ್ವೇ ಮಾಡಿದರೆ ಪಂಚಾಯಿತಿಯಲ್ಲಿ ದಾಖಲೆಗಳು ಸಿಗುತ್ತವೆ ಎಂದರೆ ಸರಿ. ಜಮೀನಿನ ಅಕ್ಕಪಕ್ಕದಲ್ಲಿ ದಾವಾ ಆಸ್ತಿಯನ್ನು ಉಪಯೋಗಿಸಲು ನಾವು ಬಿಡುತ್ತಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ವಾದಿ ರೂಪರವರಿಂದ ಖರೀದಿಸಿದ್ದ ವಿಷಯ ನನಗೆ ಗೊತ್ತು ಎಂದರೆ ಸಾಕ್ಷಿಯು ಮನೆಯ ಜಾಗ ಮಾರಿರಬಹುದು ಎಂದು ನುಡಿಯುತ್ತಾರೆ. ರೂಪರವರಿಗೆ ಪಂಚಾಯಿತಿಯವರು ಇ-ಖಾತಾ ಮಾಡಿದ್ದರು ಎನ್ನುವ ವಿಷಯ ನನಗೆ ಗೊತ್ತಿಲ್ಲ. ನಿ.ಡಿ.1 ಕ್ಕೂ ಮತ್ತು ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ವಾದಿ ಪಾಯ ಹಾಕಲು ಹೋದಾಗ ಅವರಿಗೆ ತೊಂದರೆ ಮಾಡಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**(ರೂಪಾ.ಸಿ. ವಗ್ಗಾ)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.